# ಆಹಾ ಸುದ್ದಿ!

★ ಸಸಿತೋಟ



ದಕ್ಷಿಣ ಜಪಾನಿನ ಎಹಿಮೆ ದ್ವೀಪದಲ್ಲಿ ಮಾರ್ಜಾಲಗಳದ್ದೇ ಸಾಮ್ರಾಜ್ಯ. ಇವು ಖಾಲಿ ಬಿದ್ದ ಮನೆಗಳನ್ನು ಅತಿಕ್ರಮಣ ಮಾಡಿಕೊಂಡಿವೆ. ಮೀನುಗಾರರ ಒಣಿಗಳಿಗೆ ನುಗ್ಗಿ ಮೀನುಗಳನ್ನು ರಾಜಾರೋಷವಾಗಿ ಮೆಲ್ಲುತ್ತವೆ. ಮನುಷ್ಯರು ಕೋಲು ತೆಗೆದುಕೊಂಡರೆ ದಂತಪಂಕ್ತಿ, ನಖಗಳನ್ನು ತೋರಿಸಿ ಬೆದರಿಸುತ್ತವೆ. ಒಬ್ಬ ಮನುಷ್ಯನಿಗೆ 6 ಬೆಕ್ಕುಗಳು ಇವೆಯಂತೆ. ಅವು ಮನುಷ್ಯರನ್ನೇ ಅಲ್ಪಸಂಖ್ಯಾತರ ಪಟ್ಟಿಗೆ ಸೇರಿಸಿಬಿಟ್ಟಿವೆ.



ಫ್ರಾನ್ಸ್‌ನ ಡ್ರೀಮ್‌ಡಾಲ್ ಕಂಪೆನಿ ಸಿದ್ಧಪಡಿಸಿರುವ ಸಿಲಿಕಾನ್ ಬೊಂಬೆ. ಹಲವು ಯುವಕರು ಕನಸಿನ ಕನ್ಯೆಯ ಬೆನ್ನು ಹತ್ತಿದರೆ, ಕೆಲವರು ಕನಸಿನ ಬೊಂಬೆಯ ಬೆನ್ನು ಹತ್ತುವುದರಿಂದ ಫ್ರಾನ್ಸ್‌ನಲ್ಲಿ ಈ ಲೈಂಗಿಕ ಬೊಂಬೆಗಳ ಉದ್ಯಮ ಜಾಸ್ತಿಯಾಗಿದೆಯಂತೆ. ಕಣ್ಣಿನ ಬಣ್ಣ, ಕೂದಲಿನ ಬಣ್ಣ ಹೇಗಿರಬೇಕೆಂದು ಬೇಡಿಕೆ ಸಲ್ಲಿಸಿ ಸಿಲಿಕಾನ್ ಬೊಂಬೆ ಮಾಡಿಸಿಕೊಳ್ಳುತ್ತಾರಂತೆ. ಒಮ್ಮೆ 6000 ಡಾಲರ್ ಕೊಟ್ಟರೆ ಮುಗಿಯಿತು, ನಂತರ ಗರ್ಲ್‌ಫ್ರೆಂಡ್‌ನಂತೆ ನಿರ್ವಹಣೆ ಖರ್ಚಿನ ಕಿರಿಕಿರಿ ಇಲ್ಲ!

ರಷ್ಯಾದ ಎರಡು ಮದ್ಯ ವ್ಯಸನಿ ಕರಡಿಗಳನ್ನು ವ್ಯಸನ ಬಿಡಿಸಲು ರೋಮಾನಿಯಾಗೆ ಕಳಿಸುತ್ತಿದ್ದಾರಂತೆ. ಬಾರ್ ಹೊರಗೆ ಓಡಾಡಿಕೊಂಡಿದ್ದ ಕರಡಿಗಳಿಗೆ ಬಾರ್‌ಗೆ ಭೇಟಿ ನೀಡುವವರು ಮದ್ಯ ಕೊಟ್ಟು ಕೊಟ್ಟು ಓಲಾಡುವಂತೆ ಮಾಡಿದ್ದಾರಂತೆ. ಮತ್ತೇರಿದಾಗ ಅವು ಎಗರಾಡುವುದನ್ನು ನೋಡಲು ಮತ್ತಷ್ಟು ಜನ ಸೇರುತ್ತಿದ್ದರಂತೆ. ಕಳೆದ 20 ವರ್ಷಗಳಿಂದ ಮದ್ಯದಲ್ಲೇ ಮುಳುಗಿದ್ದ ಕರಡಿಗಳನ್ನು ವಿದೇಶಕ್ಕೆ ಕಳಿಸಲು ತಗಲುವ ವೆಚ್ಚದಿಂದ ಅಲ್ಲಿಯ ಸಚಿವಾಲಯ ವ್ಯಸನಪಡುತ್ತಿದೆಯಂತೆ.

ಬ್ರಿಟನ್ನಿನ ಕುಕ್ಕುಟ ಮಂಡಳಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗದೇ ಚಿಂತೆಯಲ್ಲಿದೆಯಂತೆ. ವರ್ಷಕ್ಕೆ 60 ಸಾವಿರ ಡಾಲರ್ (ಸುಮಾರು 36 ಲಕ್ಷ ರೂಪಾಯಿ) ವೇತನದ ಆಮಿಷ ಒಡ್ಡಿದರೂ ಯಾರೂ ಇಣುಕಿ ನೋಡುತ್ತಿಲ್ಲವಂತೆ. ಅಷ್ಟಕ್ಕೂ ಆ ಉದ್ಯೋಗ ಕೋಳಿಮರಿಗಳ ಲಿಂಗ ಪತ್ತೆ ಹಚ್ಚುವುದು. ದಿನವಿಡೀ ಕೋಳಿಮರಿಗಳ ಹಿಂಭಾಗ ಪರಿಶೀಲಿಸುವ ಉದ್ಯೋಗ ಯಾರಿಗೆ ಆಕರ್ಷಕ ಹೇಳಿ!



ಕೆನಡಾದ ಯುಕೋನ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಕೂದಲು ಹಿಮಗಟ್ಟಿಸುವಿಕೆ ಸ್ಪರ್ಧೆಯ ವಿಜೇತರು ಇವರು. 40 ಡಿ. ಸೆ. ಬಿಸಿ ನೀರಿನ ಬುಗ್ಗೆಯಲ್ಲಿ ಮೈ ಅದ್ದಬಹುದು. ಆದರೆ ವಾತಾವರಣದ ಉಷ್ಣಾಂಶ -30 ಡಿ. ಸೆ. ಇದೇ ರೀತಿಯಲ್ಲಿ ಮೈ ಹೆಪ್ಪುಗಟ್ಟಿಸುವಿಕೆ ಸ್ಪರ್ಧೆಯೂ ನಡೆದುಬಿಟ್ಟರೆ ವಿಜೇತರ ಸಂಬಂಧಿಕರು ಬಹುಮಾನ ಪಡೆಯಬಹುದು.



ಚೀನಾದಲ್ಲಿ ಪ್ರತಿ ವರ್ಷ ನಡೆಯುವ ಇದು ಮ್ಯಾರಥಾನ್ ಅಲ್ಲ, ಮ್ಯಾರ-ಥಾಂಗ್. ಏಕೈಕ ಕಿರು ಉಡುಪು ತೊಟ್ಟು ಓಡುವ ಈ ಮ್ಯಾರಥಾನ್‌ನಲ್ಲಿ ಬಹುಮಾನಗಳಿಲ್ಲದಿದ್ದರೂ ಭಾಗವಹಿಸಲು ನೂಕುನುಗ್ಗಲಂತೆ. ಪರಿಸರ ಸ್ನೇಹಿ ಜೀವನಶೈಲಿಯನ್ನು ಉತ್ತೇಜಿಸಲು ಈ ಓಟವಂತೆ. ಈ ಕಿರು ಉಡುಪೂ ಪರಿಸರ ಮಾಲಿನ್ಯಕ್ಕೆ ಕೊಡುಗೆ ನೀಡುವುದಿಲ್ಲವೇ?